ಎಂ.ವಿ.ಸಿ. ನಂ. 179/2022
ಆರ್ ಡಬ್ಲ್ಯೂ-2

(ಇಂದು ದಿನಾಂಕಃ 03-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

<u>ಪಾಟೀ ಸವಾಲು 4 ನೇ ಎದುರುದಾರರ ಪರ ಶ್ರೀ ವಿ.ಆರ್.ಎಮ್. ವಕೀಲರಿಂದಃ</u>

1 ನೇ ಎದುರುದಾರರು ಮತ್ತು ಉಮೇಶನ ಮದುವೆ ಯಾವ ದಿನಾಂಕದಂದು ಆಗಿದೆ ನನಗೆ ನೆನಪಿಲ್ಲ. ಅವರ ಮದುವೆಯಾಗಿ ಸುಮಾರು 8-9 ವರ್ಷ ಆಗಿದೆ. ನಾನು ಅವರ ಮದುವೆಗೆ ಹೋಗಿದ್ದೆ. ಮದುವೆಯಲ್ಲಿ ಫೋಟೋ ತೆಗೆದ ಬಗೆ ನನಗೆ ಗೊತ್ತಿಲ್ಲ. ಮಧ್ಯಾಹ್ನ 12-1 ರ ಸಮಯದಲ್ಲಿ ಮದುವೆ ಆಗಿದೆ. ಮದುವೆ ಪುಣೆ ಯಲ್ಲಿ ಆಗಿದೆ. ನನ್ನ ತಾಂಡಾದಿಂದ ನಾನೊಬ್ಬನೆ ಮದುವೆಗೆ ಹೋಗಿದ್ದೆ. ಎರಡೂ ತಾಂಡಾದ ಕೆಲವು ಜನ ಮದುವೆಗೆ ಬಂದಿದ್ದರು ಅವರ ಹೆಸರು ಹೇಳಲು ಆಗುವುದಿಲ್ಲ. 1 ನೇ ಎದುರುದಾರಳು ನನ್ನ ಹೆಂಡತಿಯ ತಮ್ಮನ ಮಗಳು. 1 ನೇ ಎದುರುದಾರಳು ಉಮೇಶನ ಹೆಂಡತಿ ಎಂದು ಮತ್ತು ಅವರ ಮದುವೆ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉಮೇಶನಿಗೆ ಕುಡಿತದ ಚಟ ಇತ್ತು ಮತ್ತು ಆತ ಕುಡಿದು ಬಂದು 1 ನೇ ಎದುರುದಾರರ ಜೊತೆ ಜಗಳ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರ ಮತ್ತು ಉಮೇಶನ ಮದುವೆ ಯಾವತ್ತು ಆಗಿಲ್ಲ ಮತ್ತು ನಾನು ಅವರ ಮದುವೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ಕಾರಣ ಆ ದಿನ ಬೇರೆಯವರು ಮದುವೆಗೆ ಬಂದ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ,
ಚಿಂಚೋಳಿ.